ಓ.ಎಸ್. ನಂಃ 453/2023
ಪಿ.ಡಬ್ಲ್ಯೂ-1 (ಮುನೀರ)

ದಿನಾಂಕ: 11-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀಸವಾಲುಃ ಶ್ರೀ.ವಾಯ್.ಎಲ್.ಡಿ. ಪ್ರತಿವಾದಿ ಪರ ವಕೀಲರಿಂದಃ**

4. ಮಾತುಕತೆಯಾದ 15-20 ದಿನಗಳ ನಂತರ ಖರೀದಿ ಕರಾರ ಪತ್ರ ಆಗಿರುತ್ತದೆ. ಖರೀದಿ ಕರಾರ ಪತ್ರ ಬರೆಯಲು ನಾನೇ ಮಾಹಿತಿ ಕೊಟ್ಟಿರುತ್ತೇನೆ. ಆಗ ನಾನು ಮತ್ತು ಸಾಕ್ಷಿದಾರರು ಇದ್ದರು. ಖರೀದಿ ಕರಾರ ಪತ್ರದಲ್ಲಿ ನನ್ನ ಹೆಸರು ಮುನೀರಅಹ್ಮದ ದಸ್ತಗೀರಸಾಬ ಖತೀಬ ಎಂದು ಬರೆಯಿಸಿದ್ದೇನೆ. ಸಾಕ್ಷಿದಾರರಿಗೆ ಈಗ ಖರೀದಿ ಕರಾರ ಪತ್ರ ನಿಪಿ-1ನ್ನು ತೋರಿಸಿದ್ದು ಅದರಲ್ಲಿ ತಮ್ಮ ಹೆಸರು ಮುನೀರ ತಂದೆ ಅಹ್ಮದ ಖತೀಬ ಎಂದು ಬರೆಯಲಾಗಿದೆ ಎಂದರೆ ಸರಿ ಎಂದು ಹೇಳುತ್ತಾರೆ.

5. ಖರೀದಿ ಕರಾರ ಪತ್ರ ಬರೆಯಿಸಿಕೊಳ್ಳಲು ವಿಶ್ವಾಸ ಸುಣಧೋಳಿ ಇವರ ಕಚೇರಿಗೆ ಹೋಗಿದ್ದೆವು ಆಗ ಮಧ್ಯಾಹ್ನ 12.00 ಗಂಟೆ ಆಗಿತ್ತು. ಖರೀದಿ ಕರಾರ ಪತ್ರವು ದಿಃ30/12/2022 ರಂದು ಸಾಯಂಕಾಲ 04.30 ರಿಂದ 5.00 ಗಂಟೆಯವರೆಗೆ ನೋಂದ ಮಾಡಲಾಯಿತು. ಖರೀದಿ ಕರಾರ ಪತ್ರ ನೋಂದ ಮಾಡಿಸಲು ದಿಃ 28/12/2022 ರಂದು ಚಲನ್ ಕಟ್ಟಿರುತ್ತೇವೆ. ಖರೀದಿ ಕರಾರ ಪತ್ರ ಬರೆಯಿಸುವುದಕ್ಕಿಂತ ಮೊದಲೆ ಚಲನ್ ಕಟ್ಟಿದ್ದೇವೆ ಎಂದರೆ ಸರಿಯಲ್ಲ. ನಿಪಿ-1 ರ 7ನೇ ಪುಟದಲ್ಲಿ ದಿನಾಂಕ 28/12/2022 ರಂದು ಉಪ-ನೋಂದಣಿ

ಅಧಿಕಾರಿಗಳ ಕಚೇರಿಯಲ್ಲಿ ಮಧ್ಯಾಹ್ನ 03.43 ಗಂಟೆಗೆ ಫೋಟೋ ತೆಗೆಯಲಾಗಿದೆ ಎಂದು ನಮೂದಿಸಲಾಗಿದೆ ಎಂದರೆ ಸರಿಯಲ್ಲ.

6. ಕೌಜಲಗಿ ಗ್ರಾಮದಲ್ಲಿ 01ಎಕರೆಗೆ ರೂ.35,00,000/- ದಿಂದ ರೂ.40,00,000/- ಬೆಲೆ ಇದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಮತ್ತು ಪ್ರತಿವಾದಿಯ ನಡುವೆ ಯಾವುದೇ ಹಣದ ವ್ಯವಹಾರ ಆಗಿಲ್ಲ ಎಂದರೆ ಸರಿಯಲ್ಲ. ನಾನು ಗೋಕಾಕನಲ್ಲಿ ಮುಸ್ಲಿಂ ಜಮಾತನಲ್ಲಿ ಹಿರಿತನ ಮಾಡುತ್ತೇನೆ ಎಂದರೆ ಸರಿ. ನಾನು ಗುಂಡಾಗರ್ದಿ ಮಾಡಿ ನಾಲ್ಕು ಜನರನ್ನು ಕೌಜಲಗಿಗೆ ಕರೆದುಕೊಂಡು ಹೋಗಿ ಬುಲೇರೋ ವಾಹನದಲ್ಲಿ ಪ್ರತಿವಾದಿಯರನ್ನು ಎತ್ತಿ ಹಾಕಿಕೊಂಡು ಬಂದು ನಿಪಿ-1ನ್ನು ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ಚಾಕು ಮತ್ತು ಬಡಿಗೆ ತೋರಿಸಿ ದಸ್ತು ಬರಹಗಾರರ ಕಚೇರಿಯಲ್ಲಿ ಅವರ ಸಹಿ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಉಪ-ನೋಂದಣಿ ಅಧಿಕಾರಿಗಳ ಕಚೇರಿಯಲ್ಲಿಯು ಸಹ ಪ್ರತಿವಾದಿಯರ ಜೊತೆ ನಾಲ್ಕು ಜನ ಚಾಕು ಮತ್ತು ಬಡಿಗೆ ಕೊಟ್ಟು ನಿಲ್ಲಿಸಿ ಪ್ರತಿವಾದಿಯರನ್ನು ಹೆದರಿಸಿ ಅವರ ಸಹಿ ಪಡೆದಿದ್ದೇನೆ ಎಂದರೆ ಸರಿಯಲ್ಲ.

7. ಈ ದಾವೆ ಹೂಡಿದ ನಂತರ ಪ್ರತಿವಾದಿಯರ ನಡುವೆ ಸಮನ್ಸ ಜಾರಿಯಾದ ನಂತರ ಪ್ರತಿವಾದಿಯರಿಗೆ ನ್ಯಾಯಾಲಯಕ್ಕೆ ಹಾಜರಾಗಲು ಬಿಟ್ಟಿಲ್ಲ ಎಂದರೆ ಸರಿಯಲ್ಲ. ಮಾನ್ಯ ಜಿಲ್ಲಾ ನ್ಯಾಯಾಲಯದಲ್ಲಿ ದಿಃ24/06/2024 ರಂದು ಆದೇಶ ಆಗಿ ಈ ಮುಂಚೆ ಈ ದಾವೆಯಲ್ಲಿ ಆದ ತೀರ್ಪನ್ನು ರದ್ದುಪಡಿಸಿ

ಮರುವಿಚಾರಣೆಗೆ ಈ ನ್ಯಾಯಾಲಯಕ್ಕೆ ಕಳುಹಿಸಿಕೊಡಲು ಆದೇಶ ಆಗಿರುತ್ತದೆ ಎಂದರೆ ಸರಿ.

8. ದಿಃ13/09/2024 ರಂದು ನಾನು ದಾವಾ ಆಸ್ತಿಯನ್ನು ನಾನು ಮೊಹಮ್ಮದರಫೀಕ ಅಬ್ದುಲಸಾಬ ಬುಖಾರಿ ಇವರಿಗೆ ಮಾರಾಟ ಮಾಡಿದ್ದೇನೆ ಎಂದರೆ ಸರಿ, ಆದರೆ ಇನ್ನು ಖರೀದಿ ಪತ್ರ ಬರೆದುಕೊಟ್ಟಿಲ್ಲ. ದಾವಾ ಆಸ್ತಿಯ ಕಬ್ಜೆಯನ್ನು ನಾನು ಈ ಹೊತ್ತಿನವರೆಗು ತೆಗೆದುಕೊಂಡಿಲ್ಲ ಎಂದರೆ ಸರಿ. ನಾನು ಕಾನೂನುಬಾಹೀರವಾಗಿ ಮೊಹಮ್ಮದರಫೀಕ ಅಬ್ದುಲಸಾಬ ಬುಖಾರಿ ಇವರಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡಿದ್ದೇನೆ ಎಂದರೆ ಸರಿಯಲ್ಲ.

9. ಪ್ರತಿವಾದಿಯ ಗಂಡನ ಕೈಯಲ್ಲಿ ಯಾವ ದಿನಾಂಕದಂದು ರೂ.9,50,000/- ಕೊಟ್ಟಿದ್ದೇನೆಂದು ನೆನಪಿಲ್ಲ ಆದರೆ 2023ರಲ್ಲಿ ಕೊಟ್ಟಿರುತ್ತೇನೆ. ನನ್ನ ವಾದ ಪತ್ರದಲ್ಲಿ ಪ್ರತಿವಾದಿಯ ಗಂಡನ ಕೈಯಲ್ಲಿ ರೂ.9,50,000/- ಕೊಟ್ಟಿದ್ದೇನೆಂದು ಬರೆಯಿಸಿದ್ದೇನೊ ಇಲ್ಲವೊ ನೆನಪಿಲ್ಲ. ಖರೀದಿ ಕರಾರ ಪತ್ರದಲ್ಲಿ ನಾನು ಹಂತ ಹಂತವಾಗಿ ರೂ.9,50,000/- ಕೊಟ್ಟಿದ್ದೇನೆಂದು ಬರೆಯಲಾಗಿದೆ ಎಂದರೆ ಸರಿ. ಖರೀದಿ ಕರಾರ ಪತ್ರ ಬರೆದ 15 ದಿನಕ್ಕೆ ನಾನು ರೂ.9,50,000/- ಪ್ರತಿವಾದಿ ಮತ್ತು ಅವರ ಗಂಡನ ಕೈಯಲ್ಲಿ ಕೊಟ್ಟಿರುತ್ತೇನೆ.

10. ಪ್ರತಿವಾದಿಯರಿಗೆ ನಾನು ಯಾವುದೇ ದುಡ್ಡು ಕೊಡದೇ ಪ್ರತಿವಾದಿಯರ ಆಸ್ತಿ ಹೆಡೆದುಕೊಳ್ಳಬೇಕು ಎನ್ನುವ ಉದ್ದೇಶದಿಂದ ನಾನು,

ಸಾಕ್ಷಿದಾರರು ಹಾಗೂ ದಸ್ತು ಬರಹಗಾರರು ಸೇರಿಕೊಂಡು ನಿಪಿ-1ನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಹೆಚ್ಚಿನ ದುಡ್ಡು ಪಡೆದುಕೊಳ್ಳುವ ಉದ್ದೇಶದಿಂದ ದಾವಾ ಆಸ್ತಿಯನ್ನು ಮೊಹಮ್ಮದರಫೀಕ ಅಬ್ದುಲಸಾಬ ಬುಖಾರಿ ಇವರಿಗೆ ಮಾರಾಟ ಮಾಡಿದ್ದೇನೆಂದರೆ ಸರಿಯಲ್ಲ,

11. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿರುವ ಸಾಕ್ಷಿದಾರರೆಲ್ಲರೂ ನನ್ನ ಗೆಳೆಯರು ಎಂದರೆ ಸರಿಯಲ್ಲ, ಸಮಾಜದ ಹಿರಿಯರು ಇರುತ್ತಾರೆ. ಬಾಬುರಾವ್ ಮುನ್ಯಾಳ ಇವರ ಸಹಿಯನ್ನು ಒತ್ತಾಯಪೂರ್ವಕವಾಗಿ ಸಾಕ್ಷಿದಾರರೆಂದು ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯ ಗಂಡನಿಗೆ ಯಾವುದೇ ಹಣ ಕೊಟ್ಟಿಲ್ಲ ಎಂದರೆ ಸರಿಯಲ್ಲ. ರೂ.9,50,000/- ಕೊಡುವಷ್ಟು ನನ್ನ ಬಳಿ ಆರ್ಥಿಕ ಸಾಮರ್ಥ್ಯ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ಯಾವುದೇ ದುಡ್ಡು ಕೊಡದೇ ಇದ್ದರೂ ಸಹ ಈ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿರುವ ವಿಷಯಗಳೆಲ್ಲವೂ ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ. ನನ್ನ ಮತ್ತು ಪ್ರತಿವಾದಿಯರ ನಡುವೆ ಯಾವುದೇ ಹಣಕಾಸಿನ ವ್ಯವಹಾರ ಅಗದೇ ಇದ್ದರೂ ಸಹ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ</u>** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ